ಶ್ರೀಮತಿ ಮಲ್ಲಾಜಮ್ಮ :-ಸಮಾಜ ಕಲ್ಯಾಣ ಸಚಿವರು ಅಲ್ಲಿಗೆ ಹೋಗಿದ್ದರೇ?

ಶ್ರೀ ಧರ್ಮಸಿಂಗ್ :- ಇದ್ದು ಹೋಗಿಲ್ಲ; ಪೋಲೀಸ್ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ.

ಶ್ರೀಮತಿ ಮೋಟಮ್ಮ :- ಅಂಗನವಾಡಿ ಕಾರ್ಯಕರ್ತೆಯರಿಗೆ ರಕ್ಷಣೆ ಕೊಡುವುದು ಸಾಮಾಜಿಕ ನ್ಯಾಯ ದೊರಕಿಸುವುದು ನಿಮಗೆ ಬರುತ್ತದೆ. ಇವತ್ತು ಅವರಿಗೆ ಆದ ನೋವು ನಮಗೆ ಆದ ನೋವು ಅಲ್ಲವೇ? ತಾವು ಇದ್ದು ಹೋಗಬೇಕು.

ಶ್ರೀ ಧರ್ಮಸಿಂಗ್ :-ಹೋಗಿ ಬರುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ:-ಕರಾವಳಿ ಪ್ರದೇಶದಲ್ಲಿ ಸೀಗಡಿ ಮಿಾನು ಕೃಷಿಗೆ ಭೂ ಸ್ವಾಧೀನ

ಶ್ರೀ ಜಿ.ಎಸ್. ಆಚಾರ್ :- ಮಾನ್ಯ ಅಧ್ಯಕ್ಷರೇ, ಕರಾವಳಿ ಪ್ರದೇಶದಲ್ಲಿ ಸಿಗಡಿ ಕೃಷಿಗೆ ಸ್ವಾಧೀನಪಡಿಸಿಕೊಂಡ ಭೂಮಿಯ ಬಗ್ಗೆ ಮಾನ್ಯ ಮಿಾನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್ :- (ಮಿಾನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಹೇಳಿಕೆ ನೀಡಬಯಸುತ್ತೇನೆ.

ಕರ್ನಾಟಕ ರಾಜ್ಯದ ಎರಡು ಕರಾವಳಿ ಜಿಲ್ಲೆಗಳ ಪ್ರದೇಶದಲ್ಲಿ 8 ಸಾವಿರ ಹೆಕ್ಟೇರ್ ಉಪ್ಪು ನೀರು ಪ್ರದೇಶವಿದ್ದು, ಇದರಲ್ಲಿ 4 ಸಾವಿರ ಹೆಕ್ಟೇರ್ ಸೀಗಡಿ ಕೃಷಿಗೆ ಯೋಗ್ಯವೆಂದು ಅಂದಾಜು ಮಾಡಲಾಗಿದೆ. ಈ 4 ಸಾವಿರ ಹೆಕ್ಟೇರ್ ಉಪ್ಪು ನೀರು ಜಾಗದಲ್ಲಿ ಸರ್ಕಾರದ ಸ್ವಾಧೀನದಲ್ಲಿರುವ ಸ್ಥಳ ಕೇವಲ 300 ಹೆಕ್ಟೇರ್ ಜಮಿನು. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಹಣಕಾಸಿನ ನೆರವಿನಿಂದ ಉಪ್ಪು ನೀರು ಮಿನು ಕೃಷಿಕರ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಿದೆ. ಈ ಸಂಸ್ಥೆಯ ಕಾರ್ಯವ್ಯಾಪ್ತಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಉಪ್ಪು ನೀರು ಮಿನು ಕೃಷಿ ಜಮಿನು ವಿತರಣೆ ಬಗ್ಗೆ ಕೆಲವು ಸಲಹೆಗಳನ್ನು ಇತ್ತಿತ್ತು. ಈ ಸಲಹೆಯ ಮೇರೆಗೆ ಸರ್ಕಾರದ ಅಧೀನದಲ್ಲಿರುವ ಉಪ್ಪು ನೀರು ಜಮಿನಿನಲ್ಲಿ ಶೇಕಡಾ 50 ಭಾಗ ಮಿನುಗಾರರ ಸಹಕಾರ ಸಂಘಗಳಿಗೆ, ವೈಯಕ್ತಿಕ ಮಿನುಗಾರರಿಗೆ ಮತ್ತು ಇದರಲ್ಲಿ 18 ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ 1 ಹೆಕ್ಟೇರ್ ಜಾಗವನ್ನು ಕೊಡಲು ಮತ್ತು ಶೇಕಡಾ 30 ರಷ್ಟು ಉಪ್ಪು ನೀರು ಪ್ರದೇಶವನ್ನು ಸಣ್ಣ ಕೈಗಾರಿಕೆ ಉದ್ಯಮಿಗಳಿಗಾಗಿ ಮತ್ತು ತಾಂತ್ರಿಕ ಅನುಭವವಿರುವ ಸ್ವಯಂ ಉದ್ದಿಮೆಗಳಿಗೆ 1 ರಿಂದ 4 ಹೆಕ್ಟೇರ್ ಪ್ರದೇಶವನ್ನು ಉಳಿದ ಶೇಕಡಾ 20 ಜಮಿನನ್ನು 4 ಹೆಕ್ಟೇರ್‌ನಿಂದ 10 ಹೆಕ್ಟೇರ್‌ನವರೆಗೆ ದೊಡ್ಡ ಸಂಸ್ಥೆಯವರಿಗೆ ಕೊಡಲು ಸರ್ಕಾರ ಆಜ್ಞೆ ಹೊರಡಿಸಿದೆ. ಉಪ್ಪುನೀರು ಜಮಿನು ವಿತರಣೆ ಮಾಡಲು ಸರ್ಕಾರ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯನ್ನು ರಚಿಸಿ, ಈ ಸಮಿತಿಯು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಜ್ಞೆ ಹೊರಡಿಸಿದೆ. ಅದರಂತೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲಾಧಿಕಾರಿಯವರು ಜಾಹೀರಾತನ್ನು ನೀಡಿ, ಅಭ್ಯರ್ಥಿಗಳ ಅರ್ಜಿಯನ್ನು ಸ್ವೀಕರಿಸಿ, ಅವರು ಮಾಡಿದ ಶಿಫಾರಸ್ಸಿನಂತೆ ಒಟ್ಟು 175 ಹೆಕ್ಟೇರ್ ಉಪ್ಪು ನೀರು ಜಮಿನನ್ನು ಇದುವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 145 ಹೆಕ್ಟೇರ್‌ಗಳನ್ನು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 30 ಹೆಕ್ಟೇರ್ ಉಪ್ಪು ನೀರು ಕೃಷಿ ಭೂಮಿಯನ್ನು ಖಾಸಗಿ ಉದ್ದಿಮೆದಾರರಿಗೆ, ಸ್ವಉದ್ಯೋಗಿಗಳಿಗೆ, ಮಿನುಗಾರಿಕೆ ಕಾಲೇಜಿಗೆ, ಮಿನುಗಾರಿಕೆ ಸಹಕಾರ ಸಂಘಗಳ ಸದಸ್ಯರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಮತ್ತು ಖಾಸಗಿ ಅಭ್ಯರ್ಥಿಗಳಿಗೆ ಗುತ್ತಿಗೆ ನೀಡಲು ಸರ್ಕಾರವು ಆದೇಶವಿತ್ತಿದೆ. ಸರ್ಕಾರದ ಆದೇಶ ಸಂಖ್ಯೆ ಎಹೆಚ್‌ಎಫ್‌ಎಫ್315

ಎಸ್ಎಫ್ಎಂ 91 ದಿನಾಂಕ 23-12-1991ರ ಅನುಬಂಧ-11ರಲ್ಲಿ ಸ್ಥಳೀಯ ಅಭ್ಯರ್ಥಿಗಳ ಅದರಲ್ಲೂ ದುರ್ಬಲ ವರ್ಗದವರ ಗುಂಪಿಗೆ ಸೇರಿದ ಅಭ್ಯರ್ಥಿಗಳಿಗೆ ಸೂಕ್ತ ತರಬೇತಿ ನೀಡಿ ಅವರ ಸ್ಥಳದಲ್ಲೇ ಉದ್ಯೋಗಾವಕಾಶವನ್ನು ಪ್ರೋತ್ಸಾಹಿಸಲು ಸೂಚಿಸಲಾಗಿದೆ. ಆದಾಗ್ಯೂ ಈ ಆದೇಶವು ಬೇರೆ ಅಭ್ಯರ್ಥಿಗಳಿಗೆ ಜಮೀನನ್ನು ಹಂಚುವುದರ ಬಗ್ಗೆ ಯಾವುದೇ ನಿಷೇಧವನ್ನು ವಿಧಿಸುವುದಿಲ್ಲ.

ಆದಾಗ್ಯೂ ಮಾನ್ಯ ಸದಸ್ಯರವರು ಆರೋಪಿಸಿರುವಂತೆ ಯಾವುದೇ ಅಭ್ಯರ್ಥಿಯು ತಪ್ಪು ಮಾಹಿತಿ ಒದಗಿಸಿ ಜಮೀನನ್ನು ಪಡೆದುಕೊಂಡಿದ್ದಲ್ಲಿ; ಅಂತಹ ಜಮೀನನ್ನು ಹಿಂದೆ ಪಡೆದು ಸೂಕ್ತವಾದ ಅಭ್ಯರ್ಥಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಎಸ್. ಆಚಾರ್:- ಮಾನ್ಯ ಅಧ್ಯಕ್ಷರೇ, ಮಾನುಗಾರರ ಆರ್ಥಿಕ ಬದುಕಿನ ಮೇಲೆ ಬೇರೆ ಬೇರೆ ರೀತಿಯ ತೊಂದರೆಗಳು ಇತ್ತೀಚಿನ ದಿವಸಗಳಲ್ಲಿ ಸಂಭವಿಸುತ್ತಾ ಇವೆ. ಕರಾವಳಿಯಲ್ಲಿ ಹಿಂದೇ 50-60 ಜನರ ಗುಂಪು ಸೇರಿಕೊಂಡು ರಂಪಣಿ ಬಲೆಯಿಂದ ಮೀನು ಹಿಡಿದು ಅದರಲ್ಲಿ ಬಂದದ್ದನ್ನು ಹಂಚಿಕೊಳ್ಳುತ್ತಾ ಇದ್ದರು. ಒಂದು ರೀತಿಯ ಸಮಾಜವಾದಿಯ ಬದುಕಿನ ಸಂಪ್ರದಾಯವಾಗಿತ್ತು. ಅನಂತರ ಯಾಂತ್ರೀಕೃತ ಮೀನುಗಾರಿಕೆ ಪ್ರಾರಂಭವಾದಾಗ ಯಾರು ಹಣ ಇದ್ದವರು ಇದ್ದಾರೆ ಮೀನುಗಾರರಲ್ಲದವರು ಬೇರೆಯವರು ಬಂದು ಈ ಉದ್ಯಮದ ಮೇಲೆ ಬಂದು ತೊಡಗಿ ಅದರಿಂದ ತೊಂದರೆಯಾಗಲಿಕ್ಕೆ ಪ್ರಾರಂಭವಾಯಿತು. ಫೋರ್ಟ್ ಇದ್ದಲ್ಲಿ ಮಾತ್ರ ಈ ಲ್ಯಾಂಡಿಂಗ್ ಫೆಸಿಲಿಟೀಸ್ ಇತ್ತು ಅದು ಮೊದಲಿನ ಮೀನುಗಾರಿಕೆಯ ಪ್ರಕಾರ ಕರಾವಳಿಯ ಉದ್ದಕ್ಕೂ ಇತ್ತು. ಅದು ಹೋಯಿತು, ಅನಂತರ ಸೀಗಡಿ ಬೆಳೆ ಮಾಡಲಿಕ್ಕೆ ಸರ್ಕಾರ ಒಂದು ಆಲೋಚನೆ ಮಾಡಿತು. ಉಪ್ಪುನೀರಿನಲ್ಲಿ ಬ್ರಾಕೀಸ್ ವಾಟರ್ ಕಲ್ಟಿವೇಷನ್ ಅದನ್ನು ಮಾಡಿದರು. ಇದರಲ್ಲಿ 8 ಸಾವಿರ ಎಕರೆ ಜಮೀನು ಇದೆ. 4 ಸಾವಿರ ಎಕರೆ ಸೀಗಡಿ ಬೆಳೆಗೆ ಯೋಗ್ಯವಾಗಿದೆ. ಇದರಲ್ಲಿ ಕೇವಲ 300ಎಕರೆ ಸರ್ಕಾರಿ ಜಮೀನು. ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. 3700 ಎಕರೆ ಇದಯಲ್ಲ ಅದು ಖಾಸಗಿ ಜಮೀನು ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಇದು ಒಂದು. ಎರಡನೆಯದು 300 ಎಕರೆ ಹಂಚುವುದರಲ್ಲಿ ವಿಪರೀತ ತಾರತಮ್ಯವಾಗಿದೆ. ಮಾನ್ಯ ಸಚಿವರು ಏನೇ ಉತ್ತರ ಕೊಡಲಿ ಇದರಲ್ಲಿ ನನಗೆ ಸಮಾಧಾನವಿಲ್ಲ. ಏಕೆಂದರೆ ಉಪ್ಪುನೀರು ಕೃಷಿಕರ ಅಭಿವೃದ್ಧಿ ಸಂಸ್ಥೆಯನ್ನು ಮಾಡಿ ಅರ್ಜಿ ಕರೆದರು 172 ಅರ್ಜಿಗಳು ಬಂದವು. 89 ಜನರಿಗೆ ಆಯ್ಕೆಯಾಯಿತು. ಯಾರ್ಯಾರಿಗೆ ಕೊಡಬೇಕೆಂದು ವಿವರಗಳನ್ನು ಹೇಳಿದ್ದಾರೆ. ಇಂಡಿವಿಜಿಯಲ್ ಫಿಶರ್‌ಮನ್ ಎನ್ನುವಂತಹ ಕ್ಯಾಟಗರಿಯಲ್ಲಿ 58 ಜನರನ್ನು ಆಯ್ಕೆ ಮಾಡಿದ್ದಾರೆ. ನಾನು ಅವರುಗಳ ಹೆಸರನ್ನು ಓದಿ ಹೇಳುವುದಾದರೆ, ನನ್ನ ಮಿತ್ರರು ಬೇಡವೆಂದು ಹೇಳುತ್ತಿದ್ದಾರೆ ಹೋಗಲಿ. ಒಬ್ಬರು ಬಸ್ ಆಪರೇಟರ್ ಇದ್ದಾರೆ. ರಿಕ್ಷಾ ಚಾಲಕರು ಇದ್ದಾರೆ. ಮೀನುಗಾರರು ಅಲ್ಲದ ಬೇರೆ ಜನಾಂಗದವರು ಇದ್ದಾರೆ. ಎಲ್ಲಿಯವರೆಗೆ ಇದ್ದಾರೆಂದರೆ ಅದರಲ್ಲಿ ಬ್ರಾಹ್ಮಣರೂ ಇದ್ದಾರೆ. ಅವರು ಮೀನು ಸಾಕಲಿಕ್ಕೆ ಹೊರಟಿದ್ದಾರೆ. ಇಂತಹ ಒಂದು ಕೆಲಸ ಆಗಬಾರದು. ಯಾವ ಮೀನುಗಾರರು ಇದ್ದಾರೆ ಅವರು ಈ ಕೆಲಸವನ್ನು ಮಾಡಬೇಕು. ಈ ಲಿಸ್ಟ್ ಅಸಮರ್ಪಕ.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ):- ಮಾನ್ಯ ಸದಸ್ಯರು ಮೀನು ತಿನ್ನುವುದಿಲ್ಲ ಇದು ಏಕೆ? ಬ್ರಾಹ್ಮಣರು ಎಂದು ಹೇಳಿದರು ಅವರು ಮೀನು ತಿನುತ್ತಾರೇನು?

ಶ್ರೀ ಆರ್.ವಿ. ದೇಶಪಾಂಡೆ:- ಬ್ರಾಹ್ಮಣರು ಮೀನು ತಿನ್ನಬಾರದು, ಮೀನನ್ನು ವೀರಶೈವರು ಅಷ್ಟೇ ತಿನ್ನಬೇಕೇನು? ಇದನ್ನು ಲಘುವಾಗಿ ತೆಗೆದುಕೊಳ್ಳಬಾರದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್:- ವಿರೋಧ ಪಕ್ಷದ ನಾಯಕರು ಒಂದು ಶಬ್ದ ಹೇಳಿದರು, ವೀರಶೈವರು ಮಾತ್ರ ತಿನ್ನಬೇಕು ಎಂದು. ಅವರು ಯಾರು, ಅವರ ಹೆಸರು ಹೇಳಲಿ.

ಶ್ರೀ ಆರ್. ವಿ. ದೇಶಪಾಂಡೆ:- ಮಟನ್, ಚಿಕನ್ ತಿನ್ನುವುದಕ್ಕಿಂತ ಮೀನು ತಿನ್ನಬೇಕು ಅಂತ. ಮೀನು ತಿಂದರೆ ಬಹಳ ಚೆನ್ನಾಗಿ ಇರುತ್ತದೆ.

ಶ್ರೀ ಜಿ.ಎಸ್. ಆಚಾರ್:- ಶಾಸಕ ಮಿತ್ರರಲ್ಲಿ ನನ್ನ ಅರಿಕೆ ಏನೆಂದರೆ, ಯಾವುದೇ ಒಂದು ಸೀರಿಯಸ್ ವಿಷಯವನ್ನು ನಾವು ಎತ್ತಿಕೊಂಡಾಗ ಅದನ್ನು ಲಘುವಾಗಿ ತೆಗೆದುಕೊಂಡು ಹೋಗಿ ಡೈಲ್ಯೂಟ್ ಮಾಡಿದರೆ ವಿಷಯದ ಗಂಭೀರತೆಗೆ ಧಕ್ಕೆ ಬರುತ್ತದೆ. ಎರಡನೇ ಒಂದು ಕ್ಯಾಟಗರಿ ಆಯ್ಕೆಯಾಗಿದೆ. ತಾಂತ್ರಿಕ ಅನುಭವವಿರುವ ಸ್ವಯಂ ಉದ್ದಿಮೆದಾರರು ಎನ್ನುವಂಥ ಒಂದು ಕೆಟಗರಿ. ಇದರಲ್ಲಿ ಸಹ ಯಾರ್ಯಾರಿಗೆ ಆಯ್ಕೆಯಾಗಿದೆ ಎಂದರೆ ಒಬ್ಬರು ನಾರಾಯಣಶೆಟ್ಟಿ, ಎಕ್ಸ್ ಜಿಲ್ಲಾಪರಿಷತ್ ಮೆಂಬರ್, ವಂಡ್ಸೆ, ಕುಂದಾಪುರ. ಎಕ್ಸ್ ಮೆಂಬರ್ ನಾರಾಯಣಶೆಟ್ಟಿ ಎನ್ನುವವರು ಇಲ್ಲವೇ ಇಲ್ಲ. ಅದು ಹೇಗೆ ಆಯ್ಕೆ ಆಯಿತು? ಫೇಗೆ ಅರ್ಜಿ ಬಂತು, ಹೇಗೆ ಆಯ್ಕೆ ಆಯಿತು? ಇದು ನನಗೆ ಅರ್ಥವಾಗುವುದಿಲ್ಲ. ಎರಡನೆಯದಾಗಿ, ಮಂಗಳೂರು ತಾಲ್ಲೂಕಿನವರಿಗೆ ಕುಂದಾಪುರದಲ್ಲಿ, ಕುಂದಾಪುರ ತಾಲ್ಲೂಕಿನವರಿಗೆ ಉಡುಪಿಯಲ್ಲಿ, ಉಡುಪಿಯವರಿಗೆ ಮಂಗಳೂರಿನಲ್ಲಿ, ಇದು ಹೇಗೆ ಆಯ್ಕೆಯಾಗುತ್ತದೆ? ನನ್ನ ಕ್ಷೇತ್ರದಲ್ಲಿ ಒಬ್ಬರು ಇದ್ದಾರೆ ಮಂಜುನಾಥ್ ಎನ್ನುವವರು. ಅವರು ಇದನ್ನೆಲ್ಲ ನೋಡಿ ವಿಷಯವನ್ನೆಲ್ಲಾ ಅಭ್ಯಾಸ ಮಾಡಿದರು, ಮತ್ತು ಅರ್ಜಿ ಹಾಕಿದರು. ಅವರಿಗೆ ಒಂದು ಪತ್ರ ಬಂತು; 91ರ ಆಫ್ಟಿ ಪ್ರಕಾರ ನಿಮಗೆ ಕೊಡುವುದಕ್ಕೆ, ಬರುವುದಿಲ್ಲ ಅಂತ ಹೇಳಿ. ಅವರಿಗೆ ಯಾವುದೋ ಒಂದು ಮೂಲೆಯಲ್ಲಿ ಕೊಟ್ಟಿದ್ದಾರೆ. ಯಾರ್ಯಾರು ಸ್ಥಳೀಯವಾಗಿ ಮಾಡುತ್ತಾರೆ, ಅವರಿಗೆ ಕೊಡುತ್ತಿಲ್ಲ. ಉಪ್ಪುಂದದಲ್ಲಿಗೆ ಮಂಗಳೂರಿನವರಾದ ಶ್ರೀ ಎಡ್ವರ್ಡ್ ಪಿ. ಲೂಯಿಸ್ ಅನ್ನುವವರಿಗೆ ಕೊಟ್ಟಿದ್ದಾರೆ. ಇನ್ನೊಂದು ಸ್ಪೆಶನ್ ಕೆಟಗರಿಯಲ್ಲಿ 10 ಎಕರೆ ಕೊಟ್ಟಿದ್ದಾರೆ. ಒಬ್ಬನೇ ವ್ಯಕ್ತಿಗೆ ಎರಡು-ಮೂರು ಕಡೆಗಳಲ್ಲಿ ಬೇರೆ ಬೇರೆ ಕ್ಯಾಟಗರಿಯಲ್ಲಿ ಕೊಟ್ಟಿದ್ದಾರೆ.ಇದು ಹೇಗೆ ಆಯ್ಕೆ ಆಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕು. ಇದು ಅವರು ಬರುವುದಕ್ಕೆ ಮುಂಚೆ ಆದದ್ದು. ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಸಂಪೂರ್ಣವಾಗಿ ವಿಶ್ವಾಸ ಇದೆ. ಉತ್ಸಾಹದಿಂದ ಕೆಲಸ ಮಾಡತಕ್ಕಂಥ ಉಮೇದು ಮೇಲೆ ಅವರು ಹೊರಟಿದ್ದಾರೆ. ಈ ತಾರತಮ್ಯವನ್ನು ಅವರು ಸರಿಪಡಿಸಬೇಕೆಂಬುದು ನನ್ನ ಒಂದು ಅಭಿಪ್ರಾಯ. ಈ ಸೆಲೆಕ್ಷನ್ ಕಮಿಟಿಯಲ್ಲಿ ಏನಾಗುತ್ತದೆ ಎಂದರೆ, ಯಾರನ್ನೂ ರೆಫರ್ ಮಾಡದೆ ಹೇಳುವುದಾದರೆ ಯಾರ್ಯಾರೋ ಅಧಿಕಾರಿಗಳಿಗೆ ಕೊಟ್ಟುಬಿಡುತ್ತಾರೆ. ಅವರು ಎಲ್ಲಿಂದಲೋ ಬಂದಿರುತ್ತಾರೆ. ಅವರು ಕರಾವಳಿಯಲ್ಲಿ ಪ್ರಥಮವಾಗಿ ಬಂದಿರುವುದರಿಂದ, ಮೀನುಗಾರರ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆ ಹೀಗೆ ಸೆಲೆಕ್ಷನ್ ಮಾಡಿದರೆ ಕಷ್ಟವಾಗುತ್ತದೆ.

ಅಧ್ಯಕ್ಷರು:- ಸ್ವಲ್ಪ ತಾವು....

ಶ್ರೀ ಜಿ.ಎಸ್. ಆಚಾರ್:- ಒಂದು ವಿಷಯ ಹೇಳಿ ಮುಗಿಸಿಬಿಡುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಹೇಳುವಾಗ ಒಂದನ್ನು ಹೇಳಿಬಿಟ್ಟರು. ಸರ್ಕಾರಿ ಆದೇಶದ ಪ್ರಕಾರ ಮೀನುಗಾರರಿಗೆ ಅವರಿಗೆ ಇವರಿಗೆ ಬೇರೆ ಬೇರೆ, ಕ್ಯಾಟಗರಿಯವರಿಗೆ ಕೊಡಬೇಕು ಅಂತ ಇದೆ ಎಂದು. ಆದಾಗ್ಯೂ ಈ ಆದೇಶಪ್ರಕಾರ ಬೇರೆಯವರಿಗೆ ಜಮೀನನ್ನು ಹಂಚುವುದರ ಬಗ್ಗೆ ಯಾವುದೇ ನಿಷೇಧವನ್ನು ಇರಿಸುವುದಿಲ್ಲ ಅಂತ ಹೇಳಿದರು. ಇದರ ಅರ್ಥ ಏನು? ಮೀನುಗಾರರಿಗೆ ಕೊಡಬೇಕು ಅಂತ ಇದೆ. ಆದ್ದರಿಂದ ಬೇರೆಯವರಿಗೆ ಕೊಡಬಾರದು ಅಂತ ಇಲ್ಲ. ಇದು ಯಾವ ಒಂದು ಆದೇಶ? ಯಾರಿಗೆ ಆಗಬೇಕೋ ಅವರಿಗೇ ಕೊಡಬೇಕು. ಈಗ ಭೂ ಸುಧಾರಣೆ ಕಾಯ್ದೆ ಬಂದಿದೆ, ಉಳುವವನೇ ನೆಲದ ಒಡೆಯ ಎಂದು. ಹಾಗೆ ಇದರಲ್ಲಿ ಆದ ತಾರತಮ್ಯವನ್ನು ಸರಿಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ. ಬಸವರಾಜ್:- ಮಾನ್ಯ ಅಧ್ಯಕ್ಷರೇ, ಇದು ಒಂದು ಉತ್ತಮ ಯೋಜನೆ. ಮಾನ್ಯ ಶ್ರೀ ಜಿ.ಎಸ್. ಆಚಾರ್‌ರವರು ಸಮಸ್ಯಾರವಾಗಿ ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ನಾನು ಹೇಳುವುದು ಇಷ್ಟೇ. ಇಲ್ಲಿ

ತಾಂತ್ರಿಕ ಅನುಭವ ಇರುವವರಿಗೆ ಅಂತ ಹೇಳಿ ಒಂದು 'ವರ್ಡಿಂಗ್' ಇದೆ. ಅದರ ನೆಲೆಯಲ್ಲಿ ಬೇರೆ ಬೇರೆ ಕೆಟಗರಿಗೆ ಕೊಟ್ಟಿದ್ದಾರೆ. ಅದ್ದರಿಂದ ಆಚಾರ್ರವರು ಹೇಳಿದ ಹಾಗೆ ಯಾರಿಗೆ ಇದು ಸಿಗಬೇಕೋ ಅಂತಹವರನ್ನು ಗುರುತಿಸಿ ಕೊಡುವಂಥ ಕಾರ್ಯಕ್ರಮವನ್ನು ಸರ್ಕಾರದವರು, ಮತ್ತು ಮಂತ್ರಿಗಳು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಸಂತ್ ವಿ. ಸಾಲಿಯಾನ(ಮಿನುಗಾರಿಕೆ ಮತ್ತು ಬಂದರು ರಾಜ್ಯಮಂತ್ರಿ):- ದಕ್ಷಿಣ ಮತ್ತು ಉತ್ತರ ಕರ್ನಾಟಕದಲ್ಲಿ ಈ ಸಮಿತಿಯು 23.12.91ರಲ್ಲಿ ರಚನೆಯಾಯಿತು. ಅದೇರೀತಿಯಲ್ಲಿ ಈ ಸಮಿತಿಯವರು ಆಗಸ್ಟ್ 1992ರಲ್ಲಿ ಜಾಹೀರಾತು ಕೊಟ್ಟರು. ಈ ಸಮಿತಿಯಲ್ಲಿ ಚೇರ್‌ಮನ್-ಚೀಫ್ ಸೆಕ್ರೆಟರಿ, ಜಿಲ್ಲಾ ಪರಿಷತ್. ಡೆಪ್ಯುಟಿ ಕಮಿಷನರ್ ಕೋ-ಚೇರ್‌ಮನ್, ಡೆಪ್ಯುಟಿ ಡೈರೆಕ್ಟರ್, ಫಿಶರೀಸ್ ಮೆಂಬರ್ ಮತ್ತ ಅಸಿಸ್ಟೆಂಟ್ ಕಮಿಷನರ್...

ಅಧ್ಯಕ್ಷರು:- ಅವರು ಕೇಳಿದ್ದಕ್ಕೆ ಅಷ್ಟೇ ನೀವು ಉತ್ತರ ಹೇಳಿ.

ಶ್ರೀ ವಸಂತ ವಿ. ಸಾಲಿಯಾನ:- ವಿವರವಾಗಿ ಹೇಳಬೇಕಾಗುತ್ತದೆ.

ಅದೇ ರೀತಿಯಲ್ಲಿ ಅಸಿಸ್ಟೆಂಟ್ ಕಮಿಷನರ್, ಮೆಂಬರ್ ಮತ್ತು ಎಕ್ಸಿಕ್ಯೂಟಿವ್ ಆಫೀಸರ್ ನಾನ್ ಮೆಂಬರ್. ಅದೇ ರೀತಿಯಲ್ಲಿ ಅವರು ಕೆಲವು ಅಪಾದನೆಗಳ ಬಗ್ಗೆ ಹೇಳಿದ್ದಾರೆ. ಇದಕ್ಕೆ ಕೆಲವು ಕೆಟಗರಿ ಇವೆ. ಒಂದನೇ ಕೆಟಗರಿಯಲ್ಲಿ ಮಿನುಗಾರರ ಸಹಕಾರಿ ಸಂಘ, ವೈಯಕ್ತಿಕ ಮಿನುಗಾರರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡ ಇವು ಒಂದನೇ ಕೆಟಗರಿಯಲ್ಲಿ ಬರುತ್ತಾರೆ. ಇದಕ್ಕೆ 50 ಪರ್ಸೆಂಟ್ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಎರಡನೇ ಕೆಟಗರಿಯಲ್ಲಿ ಸಣ್ಣ ಕೈಗಾರಿಕೆದಾರರು ಮತ್ತು ತಾಂತ್ರಿಕ ಅನುಭವವನ್ನು ಪಡೆದಂಥವರಿಗೆ 30 ಪರ್ಸೆಂಟ್, ದೊಡ್ಡ ಉದ್ದಿಮೆ ನಡೆಸತಕ್ಕವರಿಗೆ 20 ಪರ್ಸೆಂಟ್, ಈ ರೀತಿಯಲ್ಲಿ ಅವರಿಗೆ ಜಮಿನು ಕೊಡುವುದಕ್ಕೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ತಾವು ಹೇಳಿದ ರೀತಿಯಲ್ಲಿ ಕೆಲವು ಮಿನುಗಾರರಿಗೇ ಕೊಡಬೇಕೆನ್ನುವ ಸರ್ಕಾರದ ಆಜ್ಞೆ ಇಲ್ಲ. ಅದನ್ನು ಮಾಡಬೇಕಾದರೆ, ತಿದ್ದುಪಡಿ ತರಬೇಕಾಗುತ್ತದೆ. ಅದ್ದರಿಂದ, ಮಾನ್ಯ ಸದಸ್ಯರು ಹೇಳಿದ ಎಲ್ಲಾ ವಿಚಾರಗಳನ್ನೂ ಪರಿಶೀಲಿಸಿ, ಎಲ್ಲಿ ಅನ್ಯಾಯವಾಗಿದೆ, ಅದನ್ನು ಪರಿಶೀಲಿಸಿ, ಪುನಃ ಅಂತಹ ಯೋಗ್ಯ ಅಭ್ಯರ್ಥಿಗಳಿಗೆ ಜಮಿನು ಕೊಡುವುದಕ್ಕೆ ಸರ್ವ ರೀತಿಯಲ್ಲಿ ಪ್ರಯತ್ನ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಈ ಕಾನೂನಿಗೆ ತಿದ್ದುಪಡಿ ಮಾಡುವುದಕ್ಕೂ ಸಹ ಪ್ರಯತ್ನ ಮಾಡುತ್ತೇನೆ.

Sri G.S. Achar:- Let him rectify. The whole list should be changed. ಈ ತರಹ ಅನ್ಯಾಯವಾಗಬಾರದು.

ಶ್ರೀ ವಸಂತ ವಿ. ಸಾಲಿಯಾನ:- ಖಂಡಿತವಾಗಿಯೂ ಇದನ್ನು ಪರಿಶೀಲಿಸಿ, ಸುಸಜ್ಜಿತವಾಗಿ ಮಾಡುತ್ತೇನೆ.

(2) ಮೈಸೂರು ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ರೈತರಿಗೆ ಕಬ್ಬಿನ ಧಾರಣೆಯನ್ನು ಪಾವತಿ ಮಾಡುವುದರಲ್ಲಿ ವಿಳಂಬ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರತಕ್ಕ ರೈತರಿಗೆ ಕಬ್ಬಿನ ಧಾರಣೆಯನ್ನು ಪಾವತಿ ಮಾಡುವುದರಲ್ಲಿ ತೀವ್ರ ವಿಳಂಬವಾಗಿರುವುದರಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಸಕ್ಕರೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್(ಸಕ್ಕರೆ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ಸಕ್ಕರೆ ಕಂಪನಿಗೆ ಒದಗಿಸುವ ಕಬ್ಬಿಗೆ ಬೆಲೆ ಪಾವತಿ ಮಾಡುವುದರಲ್ಲಿ ಬಹಳ ವರ್ಷಗಳಿಂದ ಒಂದು ಒಪ್ಪಂದವಾಗಿ ಇದು